# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 647

ಮಾನ್ಯ ಸದಸ್ಯರ ಹೆಸರು : ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ವಿಷಯ : ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯ ಅಡಿಯಲ್ಲಿ ಮಂಜೂರಾದ ಅನುದಾನ ಬಗ್ಗೆ

ಉತ್ತರಿಸುವ ದಿನಾಂಕ : 22.07.2019.

ಉತ್ತರಿಸುವ ಸಚಿವರು : ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2017-18 ಮತ್ತು 2018-19ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆ ಅಡಿಯಲ್ಲಿ ಯಾತ್ರಿ ನಿವಾಸಕ್ಕೆ ಮಂಜೂರಾದ ಹಾಗೂ ಇದುವರೆಗೂ ಬಿಡುಗಡೆಯಾದ ಅನುದಾನ ಎಷ್ಟು; | 2017-18 ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಯಾತ್ರಿನಿವಾಸ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಮಂಜೂರಾದ ಅನುದಾನ ಒಟ್ಟು ರೂ.200.00 ಲಕ್ಷಗಳು ಹಾಗೂ ಇಲಾಖೆಯಿಂದ ಇದುವರೆಗೆ ಬಿಡುಗಡೆ ಮಾಡಿರುವ ಅನುದಾನ ಒಟ್ಟು ರೂ.130.00 ಲಕ್ಷಗಳು. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>2018-19ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಗೆ ಯಾವುದೇ ಯಾತ್ರಿನಿವಾಸ ನಿರ್ಮಾಣ ಕಾಮಗಾರಿಗಳು ಮಂಜೂರಾಗಿರುವುದಿಲ್ಲ. |
| ಆ) | ಬಿಡುಗಡೆ ಬಾಕಿ ಇರುವ ಅನುದಾನವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) ಬಾಕಿ ಇರುವ ಅನುದಾನ ಬಿಡುಗಡೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಈ ಕುರಿತಂತೆ ಸರ್ಕಾರ ಕೈಗೊಂಡಿರುವ ಕ್ರಮವೇನು? (ಸಂಪೂರ್ಣ ಮಾಹಿತಿ ಒದಗಿಸುವುದು) | 2017-18 ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ ಪ್ರವಾಸೋದ್ಯಮ ಇಲಾಖೆಯಿಂದ ಯಾತ್ರಿನಿವಾಸ ಕಾಮಗಾರಿಗಳಿಗೆ ಬಿಡುಗಡೆ ಮಾಡಲು ಬಾಕಿ ಇರುವ ಅನುದಾನ ಒಟ್ಟು ರೂ.70.00 ಲಕ್ಷಗಳು; ಜಿಲ್ಲೆಯಲ್ಲಿ ಯಾತ್ರಿನಿವಾಸ ಕಾಮಗಾರಿಗಳಿಗೆ ಬಿಡುಗಡೆ ಮಾಡಲು ಬಾಕಿ ಇರುವ ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>ಹೌದು, ಸದರಿ ಯಾತ್ರಿನಿವಾಸ ಕಾಮಗಾರಿಗಳಿಗೆ ಈಗಾಗಲೇ ಬಿಡುಗಡೆ ಮಾಡಿರುವ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರಗಳನ್ನು ಪಡೆದು ಪರಿಶೀಲಿಸಿ, ಕಾಮಗಾರಿ ಪ್ರಗತಿ ಅನುಸಾರ ಪ್ರಸಕ್ತ ಸಾಲಿನಲ್ಲಿ ಕಾಯ್ದಿರಿಸಿರುವ ಬಾಕಿ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು. |

ಪ್ರಇ 31 ಪ್ರವಾವಿ 2019

(ಸಾ.ರಾ.ಮಹೇಶ್)

ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು

ಧಾನ ಪರಿಷತ್ತು ಸದಸ್ಯರು ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 647 ಕ್ಕೆ ಅನುಬಂಧ

017-18ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಗೆ ಪ್ರವಾಸೋದ್ಯಮ ಇಲಾಖೆಯಿಂದ ಮಂಜೂರು ಮಾಡಿರುವ ಯಾತ್ರಿನಿವಾಸ ಕಾಮಗಾರಿಗಳ ವಿವರ

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಕಾರ್ಯ ನಿರ್ವಾಹಕ ಸಂಸ್ಥೆಯ ಹೆಸರು | ಮಾರ್ಚ್-2019 ರ ಅಂತ್ಯದ ವರೆಗೆ ಬಿಡುಗಡೆ ಮಾಡಿರುವ ಅನುದಾನ | ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಲು ಕಾಯ್ದಿರಿಸಿರುವ ಅನುದಾನ | ಷರಾ |
|---|---|---|---|---|---|---|
| | **ಶಿವಮೊಗ್ಗ ಜಿಲ್ಲೆ** | | | | | |
| | **ಶಿವಮೊಗ್ಗ ತಾಲಲ್ಲೂಕು** | | | | | |
| 1 | ಶಿವಮೊಗ್ಗ ತಾಲ್ಲೂಕಿನ ಚಿಕ್ಕಕೊಡಲಗಿ ಗ್ರಾಮದಲ್ಲಿರುವ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ (ಬಂಡವಾಳ ವೆಚ್ಚಗಳು) | 25.00 | ನಿರ್ಮಿತಿ ಕೇಂದ್ರ ಶಿವಮೊಗ್ಗ | 20.00 | 5.00 | ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. ಪ್ರಸಕ್ತ ಸಾಲಿನಲ್ಲಿ ಕಾಯ್ದಿರಿಸಿರುವ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ. |
| 2 | ಆಯನೂರು ಹೋಬಳಿ ಮಲೇಶಂಕರ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ. (ಬಂಡವಾಳ ವೆಚ್ಚಗಳು) | 25.00 | ನಿರ್ಮಿತಿ ಕೇಂದ್ರ ಶಿವಮೊಗ್ಗ | 10.00 | 15.00 | ಕಾಮಗಾರಿ ಪ್ರಗತಿಯಲ್ಲಿದೆ. ಪ್ರಸಕ್ತ ಸಾಲಿನಲ್ಲಿ ಕಾಯ್ದಿರಿಸಿರುವ ಅನುದಾನವನ್ನು ಬಿಡುಗಡೆ ಮಾಡಲು ಕಡತ ಲೆಕ್ಕ ಶಾಖೆಗೆ ಕಳುಹಿಸಲಾಗಿದೆ. |
| | **ಸೊರಬ ತಾಲಲ್ಲೂಕು** | | | | | |
| 3 | ಸೊರಬ ತಾಲ್ಲೂಕು ಜಡೆ ಗ್ರಾಮದ ಸಂಸ್ಥಾನ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ. (ಬಂಡವಾಳ ವೆಚ್ಚಗಳು) | 25.00 | ನಿರ್ಮಿತಿ ಕೇಂದ್ರ ಶಿವಮೊಗ್ಗ | 20.00 | 5.00 | ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. ಪ್ರಸಕ್ತ ಸಾಲಿನಲ್ಲಿ ಕಾಯ್ದಿರಿಸಿರುವ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ. |
| 4 | ಸೊರಬ ಪಟ್ಟಣದಲ್ಲಿರುವ ಪುರಾಣ ಪ್ರಸಿದ್ಧವಾದ ಶ್ರೀರಂಗನಾಥ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ನಿರ್ಮಾಣ. (ಬಂಡವಾಳ ವೆಚ್ಚಗಳು) | 50.00 | ನಿರ್ಮಿತಿ ಕೇಂದ್ರ ಶಿವಮೊಗ್ಗ | 20.00 | 30.00 | ನಿವೇಶನ ಲಭ್ಯವಿಲ್ಲದ ಕಾರಣ ಸೊರಬ ತಾ॥ ಚಂದ್ರಗುತ್ತಿ ಪ್ರವಾಸಿ ತಾಣದಲ್ಲಿ ಯಾತ್ರಿನಿವಾಸ ಕಾಮಗಾರಿಯನ್ನು ಕೈಗೊಳ್ಳಲು ಬದಲಿ ಕಾಮಗಾರಿ ಪ್ರಸ್ತಾವನೆ ಬಂದಿರುತ್ತದೆ. ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸಲಾಗುತ್ತಿದೆ. |
| | **ಸಾಗರ ತಾಲಲ್ಲೂಕು** | | | | | |
| 5 | ಸಾಗರ ತಾಲ್ಲೂಕು. ಆನಂದಪುರಂನ ಶ್ರೀ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾ ಸಂಸ್ಥಾನ ಮಠದ ಹತ್ತಿರ ಯಾತ್ರಿನಿವಾಸ ನಿರ್ಮಾಣ. (ಬಂಡವಾಳ | 25.00 | ನಿರ್ಮಿತಿ ಕೇಂದ್ರ ಶಿವಮೊಗ್ಗ | 20.00 | 5.00 | ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ, ಪ್ರಸಕ್ತ ಸಾಲಿನಲ್ಲಿ ಕಾಯ್ದಿರಿಸಿರುವ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ. |
| | **ತೀರ್ಥಹಳ್ಳಿ ತಾಲಲ್ಲೂಕು** | | | | | |
| 6 | ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ಕವಲೇದುರ್ಗ ಕೆಳದಿ ರಾಜಗುರು ಮಹಾಮತ್ತಿನ ಭುವನಗಿರಿ ಸಂಸ್ಥಾನ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ. | 50.00 | ನಿರ್ಮಿತಿ ಕೇಂದ್ರ ಶಿವಮೊಗ್ಗ | 40.00 | 10.00 | ಸದರಿ ಕಾಮಗಾರಿಗೆ ಮೊದಲ ಕಂತಾಗಿ ರೂ.20.00 ಲಕ್ಷಗಳನ್ನು ದಿ:27.02.2018 ರಂದು ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಪ್ರಾರಂಭಿಸಬೇಕಿದೆ. |
| | **ಶಿವಮೊಗ್ಗ ಜಿಲ್ಲೆ ಒಟ್ಟು ಮೊತ್ತ** | **200.00** | | **130.00** | **70.00** | |